ಉಟ್ಟ ಬಟ್ಟೆಯಲ್ಲೆಂಬಂತೆ ಕ್ವಾರ್ಟರ್ಸ್‌ಗೆ ಮನೆ ಬದಲಾಯಿಸಿದವಳು ಅಲ್ಲಿಂದ ತಂದದ್ದು ಕೇವಲ ತನ್ನ ಪ್ರೀತಿಯ 'ಟೆಡ್ಡಿಬೇರ್' ಮಾತ್ರ. ಇವೆಲ್ಲವನ್ನೂ ಚಿರಂತನ್ ಜೊತೆಗೆ ಹಂಚಿಕೊಳ್ಳಲೇಬೇಕಿತ್ತು. ನಾಟಕ ಆರಂಭವಾಗುವ ಹೊತ್ತಿಗೆ ಅವನು ಎದ್ದು ನಿಂತ. ಅವಳು ಅವನ ಕೈ ಜಗ್ಗಿ ಹಿಡಿದಳು. ಕಣ್ಣುಗಳು ಕೊಳಗಳಂತಾಗಿದ್ದವು. ಅಧೀರನಾದ. ಎಂತಹ ಧೈರ್ಯವಂತ ಹುಡುಗಿ ಈಕೆ ಎಂದುಕೊಂಡಿದ್ದ. ಅವಳನ್ನು ಸಮಾಧಾನಿಸಿ ಪಕ್ಕದಲ್ಲಿಯೇ ಕುಳಿತ. ಅವಳು ತನ್ನ ಬದುಕಿನ ಕಥೆಯನ್ನು ತೆರೆದಳು. ರಂಗಭೂಮಿಯ ಒಳಗೆ



'ಬೆಲ್' ಬಾರಿಸಿತು. ಇದ್ದಕ್ಕಿದ್ದಂತೆ ನಗಾರಿಯ ಸದ್ದು ತಾರಕಕ್ಕೇರಿತು. ಅವಳ ಬದುಕಿನ ವಿಪ್ಲವದಂತೆ ಅವನ ಮನದಲ್ಲೂ ವಿಪ್ಲವ. ಅವಳ ಕಣ್ಣೊರೆಸಿದ. ಬದುಕಿಗೆ ಆಸರೆ ಎಂಬಂತೆ ಕೈಯನ್ನು ಮೃದುವಾಗಿ ಹಿಡಿದ.

ಶಿಲ್ಪಾಳಿಗೆ ಕ್ವಾರ್ಟರ್ಸ್‌ನಲ್ಲಿ ಹೆಚ್ಚು ಸಮಯ ಇರುವಂತಿರಲಿಲ್ಲ. ಕೇವಲ ಸಂಸಾರಸ್ಥರಿಗೆ ಮಾತ್ರ ಕ್ವಾರ್ಟರ್ಸ್ ಕೊಡುತ್ತಿದ್ದುದು. ಅವಳು ಅಲ್ಲಿಂದ ಹೊರಗೆ ಬರಲೇಬೇಕಾಯಿತು. ಮತ್ತೊಂದು ಮರದ ಆಸರೆ ಸಿಕ್ಕಿತಾದರೂ ಅವಳ ಹಿಂದಿನ ಬದುಕಿನಂತೆ ರಸಮಯವಾಗಿರಲಿಲ್ಲ. ಚಿರಂತನ್ ಸಂಯಮಿ, ಸಹೃದಯಿ. ಎಂದೂ ಎಚ್ಚರತಪ್ಪಿ ನಡೆದವನಲ್ಲ. ಅವಳು ಒತ್ತಾಯಿಸಿದರೂ ತನ್ನ ಇತಿಮಿತಿಯಲ್ಲೇ ಬದುಕುತ್ತಿದ್ದವನು. ಅವಳು ಬೇರೊಂದು ರೀತಿಯಲ್ಲಿ ಯೋಚಿಸಲಾರಂಭಿಸಿದಳು. ಎಲ್ಲರೂ ಸ್ವಾರ್ಥಿಗಳೇ ತನ್ನನ್ನು ಸೇರಿಸಿ ಅಂದುಕೊಂಡಳು. ಅವಳು ಪ್ರಯತ್ನಿಸುತ್ತಿದ್ದ, ನಿರೀಕ್ಷಿಸುತ್ತಿದ್ದ 'ವರ್ಗಾವಣೆ ಪತ್ರ' ಅವಳ ಕೈ ಸೇರಿತು.

* * *

ಶಿಲ್ಪಾಳ ಕಥೆ ಕೇಳಿದ ಮೇಲೆ ಚಿರಂತನ್ ಚಿಂತಿತನಾದ. ಬದುಕಿನಲ್ಲಿ ನೊಂದ ಹೆಣ್ಣೆನ್ನುವ ಅನುಕಂಪದಿಂದ ಒಂದು ನಿರ್ಧಾರಕ್ಕೆ ಬಂದವನು ಅವಳು ಮನೆಗೆ ಬಂದಾಗ ಎಲ್ಲವನ್ನೂ ಹೇಳಿ ಬಿಡಬೇಕೆಂದುಕೊಂಡ. ಅವಳಲ್ಲಿ ಸ್ವಾರ್ಥ ತುಂಬಿತ್ತಲ್ಲ? ವರ್ಗಾವಣೆಯ ಆರ್ಡರ್ ಬಂದಿರುವುದನ್ನು ಅವನಿಂದ ಮುಚ್ಚಿಟ್ಟಳು. ಅವನು ತನ್ನ ನಿವೇದನೆಯನ್ನು ತೆರೆದಿಡಬೇಕೆಂದಾಗ ಅವಳು ಅವಕಾಶ ಕೊಡದಂತೆ 'ಅರ್ಜೆಂಟ್ ಊರಿಗೆ ಹೋಗಿ ಬರ್ತೀನ್ ಕಣೋ' ಎಂದು ಅವನು ಇಲ್ಲದ ಸಮಯದಲ್ಲಿ ತನ್ನ ಸೂಟುಕೇಸ್, ಟೆಡ್ಡಿಬೇರ್ ತೆಗೆದುಕೊಂಡು ಊರಿಗೆ ಹೊರಟಳು. ಚಿರಂತನ್ ಮನೆಗೆ ಬರುವಾಗ ಎಲ್ಲವೂ ಖಾಲಿ ಖಾಲಿ. ಫೋನ್ ಮಾಡಿದರೆ ಉತ್ತರವಿಲ್ಲ. ಡಿಪೋ ಆಫೀಸ್ ಆತನಿಗೆ ತಿಳಿಯದ್ದೇನಲ್ಲ. ಅವಳನ್ನು ಬೆಳಿಗ್ಗೆ ಡ್ರಾಪ್ ಮಾಡುತ್ತಲೂ ಸಂಜೆ ಹೊತ್ತಿಗೆ ಕರೆದುಕೊಂಡು ಬರಲು ಅವನು ಪ್ರತೀ ದಿನ ಹೋಗಿಬರುತ್ತಿದ್ದ.

ನೇರವಾಗಿ ಡಿಪೋಗೆ ಬಂದಾಗ ಅಲ್ಲೂ ಅವಳ ಸುಳಿವಿಲ್ಲ. ಆಫೀಸಿನಲ್ಲಿ ವಿಚಾರಿಸಿದ. ಅವಳು ವರ್ಗಾವಣೆಯಾಗಿ ಊರಿಗೆ ಹೋಗಿರುವ ವಿಷಯ ತಿಳಿಯಿತು. ನೊಂದುಕೊಂಡ. ಆಸರೆಯಲ್ಲಿದ್ದ ಬಳ್ಳಿ ತಟಕ್ಕನೆ ಬಿದ್ದಾಗ ಮರಕ್ಕಾಗುವ ನೋವಿನಂತಹ ಬೇಸರದ ಛಾಯೆ ಅವನಿಗೆ. ಯಾಕೆ ಈ ರೀತಿ ಮಾಡಿದಳೆನ್ನುವ ಚಿಂತೆ. ಫೋನಾಯಿಸಿದರೆ ಸದ್ಯ ಈ ಸಂಖ್ಯೆ ಚಾಲ್ತಿಯಲ್ಲಿಲ್ಲವೆನ್ನುವ ಸುದ್ದಿ. ಪ್ರಯತ್ನ ಕೈ ಬಿಟ್ಟ. ವಿರಹಿಯಂತೆ ಊರಿಗೆ ಬಂದವನನ್ನು ಕೈಬೀಸಿ ಕರೆದದ್ದು ಕಡಲ ಕಿನಾರೆ.

ಅದೆಷ್ಟು ಹೊತ್ತು ಕುಳಿತಿದ್ದನೋ ವಸುಮತಿಯಕ್ಕ ಸಮುದ್ರ ದಂಡೆಯ ಮೇಲೆ ವಾಕಿಂಗ್ ಮಾಡುತ್ತಿದ್ದವಳು ಅವನನ್ನು ಗುರುತಿಸಿ ಮನೆಗೆ ಕರೆದುಕೊಂಡು ಬಂದಳು. ಮಂಕಾಗಿದ್ದ. ಅವಳೇ ಮಾತಿಗಾರಂಭಿಸಿದಳು. 'ಮದುವೆಯಾಗುವ ಯೋಚನೆಯಿದೆಯನಾ?' ಎಂದಳು ಹಿತೈಷಿಯಾಗಿ. ಶಿಲ್ಪಾಳ ನೆನಪಿನಿಂದ ಹೊರಬರಲೇಬೇಕಿತ್ತು. ಒಪ್ಪಿಗೆಯಿತ್ತ. ಎಲ್ಲವೂ ಮೇಳಾಮೇಳಿಯಾಗಿ 'ಶುಭಸ್ಯ ಶೀಘ್ರಂ' ಎನ್ನುವಂತೆ ವೈದೇಹಿ ಜೊತೆಗೆ ಮದುವೆ ನಡೆದೇಹೋಯಿತು.

ಹಳೆಯದನ್ನೆಲ್ಲಾ ಮೆಲುಕು ಹಾಕಿಕೊಂಡ ಚಿರಂತನ್. ಅದೇ ಸಮುದ್ರ ಅದೇ ಅಲೆಗಳು, ಅದೇ ಗಾಳಿ ನಿರಂತರವಾಗಿದ್ದರೂ ವಸುಮತಿಯಕ್ಕನಲ್ಲಿ ಮಾತ್ರ ಅಗಾಧವಾದ ಬದಲಾವಣೆಗಳಾಗಿವೆ. ಮಗನಿಗೆ ಹುಡುಗಿ ಸಿಗಲಿಲ್ಲವೆನ್ನುವ ಕೊರಗಿದೆ. ಅವಳು 'ನಾವು ಮಾಡಿದ ಕರ್ಮ' ಎಂದಿದ್ದು ಸುಳ್ಳಲ್ಲ. ಕರ್ಮ ನಮ್ಮನ್ನು ಎಂದೂ ಬಿಟ್ಟು ಹೋಗುವುದಿಲ್ಲವೆನಿಸಿತು ಚಿರಂತನ್‌ಗೆ.

* * *

ಆಗಷ್ಟೇ ವಸುಮತಿಯಕ್ಕ ಆ ಮನೆಗೆ ಸೊಸೆಯಾಗಿ ಬಂದವಳು. ಮನೆಯಲ್ಲಿ ಹತ್ತಾರು ಮಂದಿ. ಒಂದು ರೀತಿಯಲ್ಲಿ ಕೂಡು ಕುಟುಂಬ, ವಸುಮತಿಯ ಗಂಡನ ತಂಗಿಯಂದಿರು ಮೂವರು ಹರೆಯಕ್ಕೆ ಕಾಲಿಟ್ಟರೂ ಮದುವೆಯಾಗಿರಲಿಲ್ಲ. ಅವರು ಮದುವೆಯಾಗುವವರೆಗೂ ತೀರ್ಥಯ್ಯ ಕಾಯಲಿಲ್ಲ. ಸೋದರಿಕೆಯಲ್ಲಿಯೇ ಹುಡುಗಿ ನೋಡಿ ವಸುಮತಿಯನ್ನು ಮಡದಿಯಾಗಿ ಸ್ವೀಕರಿಸಿದ.

ಮನೆಯಲ್ಲಿ ದಿನಾ ಗಲಾಟೆ. ವಯಸ್ಸಾದ ತಂದೆ ತಾಯಿಯರನ್ನೂ ತೀರ್ಥಯ್ಯ ಉಪೇಕ್ಷಿಸಿದ. ಇತ್ತ ತನ್ನ ತಂಗಿಯರನ್ನು ನಿರ್ಲಕ್ಷಿಸಿದ. ತನಗೂ ವಯಸ್ಸು ಕಾಯುವುದಿಲ್ಲವೆಂದು ಮದುವೆ ಮಾಡಿಕೊಂಡು ಬಂದ. ವಸುಮತಿಯೇನು ಕಡಿಮೆಯವಳೇ? ನಾದಿನಿಯವರನ್ನು ಒಪ್ಪಿಕೊಳ್ಳುವವಳಲ್ಲ. ಆದಷ್ಟು ಬೇಗ ಅವರನ್ನು ಮದುವೆ ಮಾಡಿ ಕಳುಹಿಸಬೇಕೆನ್ನುವ ಜವಾಬ್ದಾರಿಯುಳ್ಳವಳು. ಅವರನ್ನು ಮಾತಿನಲ್ಲಿಯೇ ಇರಿಯುತ್ತಾ ಗಂಡನ ಜೊತೆಗೆ ಬಾಳುವೆ ನಡೆಸುತ್ತಿದ್ದರೂ ಊರವರ ಬಾಯಿಯಲ್ಲಿ ಕೆಟ್ಟವಳೆನ್ನುವ ಮಾತು ಬಂದಾಗ ವಿಚಲಿತಳಾದಳು. ಮನೆಯ ವಿಷಯ ಗೌಪ್ಯವಾಗಿರದೆ ಊರವರಿಗೆ ಯಾರು ಹೇಳಿಕೊಂಡು ಬರುತ್ತಾರೆ? ಅವಳಿಗೆ ನಾದಿನಿಯರ ಮೇಲೆ ಸಂದೇಹ.

ಒಂದು ದಿನ ಮೂವರನ್ನು ಕೂರಿಸಿ ಚೆನ್ನಾಗಿ ಮಾತಿನ ಪೆಟ್ಟುಕೊಟ್ಟಿದ್ದೇ ಮೂವರು ನಾದಿನಿಯರು ಹೆದರಿ ಕಂಗಾಲಾದರು. ಯಾವ ಪ್ರಾರಬ್ಧವೋ ತೀರ್ಥಯ್ಯನಿಗೂ ಗೊತ್ತಾಗದಂತೆ ಮನೆ ಬಿಟ್ಟು ಹೋದವರು ಎಲ್ಲಿದ್ದಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಊರವರು ಬಾಯಿಗೊಂದರಂತೆ ಆಡಿಕೊಳ್ಳುವವರೇ. ಕೆಲವರು ತುಂಬಿ ಹರಿಯುವ ಪಾಪನಾಶಿನಿ ನದಿಗೆ ಹಾರಿದ್ದಾರೆಂದೂ; ಇನ್ನು ಕೆಲವರು ಯಾರ ಜೊತೆಗೋ ಬೊಂಬಾಯಿಗೆ ಹೋಗಿದ್ದಾರೆಂದೂ; ಇನ್ನು ಕೆಲವರು ಘಟ್ಟದ ಕಡೆಗೆ ಹೋಗಿದ್ದಾರೆಂದೂ ಪುಕಾರು ಎಬ್ಬಿಸಿದರು.

ಅಂದಿನಿಂದ ವಸುಮತಿಗೆ ಕೀಳರಿಮೆ ಶುರುವಾಯಿತು. ಯಾರೇ ಬಂದು ಏನೇ ಹೇಳಲಿ ತನ್ನ ಕೈಲಾದ ಸಹಾಯವೆನ್ನುವಂತೆ ಸಂಬಂಧಗಳನ್ನು ಹೇಳಿ ಮದುವೆ ಮಾಡುವಂತಹ ಕೆಲಸ ಆರಂಭಿಸಿದಳು. ಅಷ್ಟರಲ್ಲಿಯೇ ಆದಿತ್ಯ ಜನಿಸಿದ್ದ. ಆದರೂ ಹುಡುಗಾ ಹುಡುಗಿಯ ಮೇಳಾಮೇಳಿ ನೋಡಿ ಸಂಬಂಧವನ್ನು ಕುದುರಿಸುತ್ತಿದ್ದಳು.

ಆದರೆ, ಈಗ ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ... ನಿಟ್ಟುಸಿರಿಟ್ಟು ಸಮುದ್ರ ದಂಡೆ ಕಡೆಗೆ ವಾಕಿಂಗ್ ಹೊರಟಳು.

ಪ್ರತಿಕ್ರಿಯಿಸಿ: **feedback@sudha.co.in**